ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 02-07-1970

*<u>ಶಾಂತಿಯ ಶಕ್ತಿಯ ಪ್ರಯೋಗ</u>* (साइलेंस बल का प्रयोग)

ತಮ್ಮನ್ನು ತಾವು ಸ್ನೇಹ ಮತ್ತು ಶಕ್ತಿಯ ರೂಪ ಎಂದು ತಿಳಿಯುತ್ತೀರಾ? ಶಕ್ತಿಯರ ರ್ತವ್ಯ ಏನೆಂದು ತಾವು ತಿಳಿದಿದ್ದೀರಾ? ಶಕ್ತಿಯರ ಯಾವ ಎರಡು ಮುಖ್ಯ ಗುಣಗಳು ಗಾಯನ ಮಾಡಲ್ಪಡುತ್ತವೆ? ತಮ್ಮ ಸ್ಮೃತಿಚಿಹ್ನೆಯಲ್ಲಿ ವಿಶೇಷವಾಗಿ ಏನನ್ನು ನೋಡುತ್ತೀರಿ? ಶಕ್ತಿಯರ ಮೂರ್ತಿಯಲ್ಲಿ ಮುಖ್ಯವಾಗಿ ಯಾವ ವಿಶೇಷತೆಯನ್ನು ನೋಡುತ್ತೀರಿ? ಸ್ವಯಂ ಶಕ್ತಿಯರಾಗಿದ್ದೀರಿ ಮತ್ತು ತಮ್ಮ ವಿಶೇಷತೆ ತಮಗೇ ತಿಳಿಯದೇ? ಎಷ್ಟು ಪ್ರೇಮಮೂರ್ತಿಯೋ ಅಷ್ಟೇ ಸಂಹಾರಿಮೂರ್ತಿಯಾಗಿರುವುದು ಶಕ್ತಿಯರ ವಿಶೇಷತೆಯಾಗಿದೆ. ಶಕ್ತಿಯರ ಕಣ್ಣುಗಳು ಸದಾ ಪ್ರೇಮ ಮೂರ್ತಿಯಾಗಿರುತ್ತವೆ ಆದರೆ ಎಷ್ಟು ಪ್ರೇಮಮೂರ್ತಿಯೋ ಅಷ್ಟೇ ವಿಕರಾಳ ರೂಪವೂ ಆಗಿರುತ್ತವೆ. ಒಂದು ಕ್ಷಣದಲ್ಲಿ ಯಾರನ್ನಾದರೂ ಪ್ರೇಮ ಮೂರ್ತಿಯನ್ನಾಗಿ ಮಾಡಬಹುದು, ಒಂದು ಕ್ಷಣದಲ್ಲಿ ವಿನಾಶವನ್ನೂ ಮಾಡಬಹುದು. ಇಂತಹ ಎರಡೂ ಗುಣಗಳನ್ನು ತಮ್ಮಲ್ಲಿ ನೋಡುತ್ತೀರಾ? ಎರಡೂ ಗುಣಗಳು ಪ್ರತ್ಯಕ್ಷ ರೂಪದಲ್ಲಿ ಬರುತ್ತವೆಯೋ ಅಥವಾ ಗುಪ್ತರೂಪದಲ್ಲಿ ಇವೆಯೋ? ಪ್ರೇಮರೂಪ ಪ್ರತ್ಯಕ್ಷವಾಗಿದೆ ಮತ್ತು ಶಕ್ತಿರೂಪ ಗುಪ್ತವಾಗಿದೆಯೇ? ಹಾಗಾದರೆ ಆ ವಿಕರಾಳ ರೂಪವನ್ನು ಯಾವಾಗ ಪ್ರತ್ಯಕ್ಷ ಮಾಡುವಿರಿ ಗೊತ್ತಿದೆಯಾ? ಇತ್ತೀಚೆಗೆ ಬಾಪ್ ದಾದಾ ವಿಶೇಷ ಯಾವ ಸ್ಲೋಗನ್ ಕೊಡುತ್ತಾರೆ? "ಯಾವಾಗಲಾದರೂ ಅಲ್ಲ ಆದರೆ ಈಗಲೇ ಮಾಡುತ್ತೇವೆ", ಯಾವಾಗಲಾದರೂ ಎಂಬ ಶಬ್ದವನ್ನು ದುರ್ಬಲರು ಹೇಳುತ್ತಾರೆ. ಬಹಾದ್ದೂರ್ ಶಕ್ತಿಯರು ಈಗಲೇ ಎಂದು ಹೇಳುತ್ತಾರೆ. ಹೇಗೆ ಸ್ವಯಂ ಅವಿನಾಶಿಯಾಗಿರುವಿರೋ ಹಾಗೆಯೇ ಈ ಮಾಯೆಯಲ್ಲಿ ಸಿಲುಕಿ ವಿನಾಶವನ್ನು ಹೊಂದುವುದು ಅವರಿಗೆ ಅಸಾಧ್ಯವಾಗಿದೆ. ಯಾರು ಅವಿನಾಶಿ ಆಗಿರುವರೋ ಅವರಿಗೆ ಮಾಯೆಯ ಯಾವುದೇ ಅಲೆಯಲ್ಲಿ ಅಲುಗಾಡುವುದು ಸಹ ಅಸಾಧ್ಯವಾಗಿದೆ. ಹೇಗೆ ಬಾಪ್ ದಾದಾರಿಗೆ ಅಸಾಧ್ಯವೆಂದು ಹೇಳುತ್ತೀರೋ ಹಾಗೆ ಯಾರು ಅವಿನಾಶಿ ಸ್ಥಿತಿಯಲ್ಲಿರುತ್ತಾರೋ ಅವರಿಗೆ ಮಾಯೆಯ ಯಾವುದೇ ಸ್ವರೂಪಕ್ಕೆ ಬಾಗುವುದು ಅಸಾಧ್ಯವಾಗಿದೆ. ಯಾರು ಸ್ವಯಂ ಬಾಗುತ್ತಾರೋ ಅವರ ಎದುರಿಗೆ ಬೇರೆಯವರು ಹೇಗೆ ಬಾಗುವರು? ಇಡೀ ವಿಶ್ವವನ್ನು ತಮ್ಮೆದುರಿಗೆ ಬಾಗಿಸುವವರೇ ತಾನೆ? ಸಿಂಹದ ಶಕ್ತಿಯವರ ಒಂದೂ ಸಂಕಲ್ಪ ಅಥವಾ ಒಂದು ಮಾತೂ ಸಹ ವ್ಯರ್ಥ ಹೋಗಲಾರದು. ಏನು ಹೇಳುವರೋ ಅದನ್ನು ಮಾಡುವರು, ಸಂಕಲ್ಪ ಮತ್ತು ಕರ್ಮದಲ್ಲಿ ಅಂತರವಿರುವುದಿಲ್ಲ ಏಕೆಂದರೆ ಸಂಕಲ್ಪವೂ ಜೀವನದ ಅಮೂಲ್ಯ ಖಜಾನೆಯಾಗಿದೆ. ಹೇಗೆ ಸ್ಥೂಲ ಖಜಾನೆಯನ್ನು ವ್ಯರ್ಥ ಮಾಡುವುದಿಲ್ಲವೋ ಹಾಗೆ ಯಾರ ಮೂರ್ತಿಯಲ್ಲಿ ಎರಡೂ ಗುಣಗಳು ಪ್ರತ್ಯಕ್ಷ ರೂಪದಲ್ಲಿವೆಯೋ ಅಂತಹ ಶಿವಶಕ್ತಿಯರ ಒಂದು ಸಂಕಲ್ಪವೂ ವ್ಯರ್ಥವಿರುವುದಿಲ್ಲ. ಒಂದೊಂದು ಸಂಕಲ್ಪದಿಂದ ಸ್ವಯಂನ ಮತ್ತು ಸರ್ವರ ಕಲ್ಯಾಣವಾಗುತ್ತದೆ. ಒಂದು ಕ್ಷಣದಲ್ಲಿ, ಒಂದು ಸಂಕಲ್ಪದಿಂದಲೂ ಕಲ್ಯಾಣ ಮಾಡಬಹುದು. ಆದ್ದರಿಂದ ಶಕ್ತಿಯರನ್ನು ಕಲ್ಯಾಣಿ ಎಂದು ಹೇಳುತ್ತಾರೆ. ಬಾಪ್ ದಾದಾ ಹೇಗೆ ಕಲ್ಯಾಣಕಾರಿಯೋ ಹಾಗೆ ಮಕ್ಕಳ ಕಲ್ಯಾಣಕಾರಿಯ ಹೆಸರು ಪ್ರಸಿದ್ಧವಾಗಿದೆ. ನಮ್ಮ ಎಷ್ಟು ಕ್ಷಣಗಳಲ್ಲಿ, ಎಷ್ಟು ಸಂಕಲ್ಪಗಳು ಸಫಲವಾದವು ಎಷ್ಟು ಅಸಫಲವಾದವು ಎಂಬುದರ ಲೆಕ್ಕವನ್ನು ಈಗ ನೋಡಬೇಕು. ಒಂದು ಸ್ಥಾನದಲ್ಲಿ ಕುಳಿತು ತಮ್ಮ ಅಸ್ತ್ರಗಳಿಂದ ಒಂದು ಕ್ಷಣದಲ್ಲಿ ವಿನಾಶ ಮಾಡುವಂತೆ ಇತ್ತೀಚೆಗೆ ವಿಜ್ಞಾನವು ಬಹಳ ಉನ್ನತಿಯನ್ನು ಹೇಗೆ ಮಾಡಿದೆಯೋ ಹಾಗೆ ಶಕ್ತಿಯರ ಈ ಶಾಂತಿಯ ಬಲ ಎಲ್ಲಿಯೇ ಕುಳಿತರೂ ಒಂದು ಕ್ಷಣದಲ್ಲಿ ಕೆಲಸ ಮಾಡಲಾರದೇ? ಅವರು ಎಲ್ಲಿಗೆ ಹೋಗುವ ಅಥವಾ ಬರುವ ಅವಶ್ಯಕತೆ ಇಲ್ಲ. ತಮ್ಮ ಶುದ್ಧ ಸಂಕಲ್ಪಗಳಿಂದ ಆತ್ಮರನ್ನು ಸೆಳೆದು ತಂದು ನಿಲ್ಲಿಸುವುದು, ಹೋಗಿ ಪರಿಶ್ರಮ ಪಡಬೇಕಾಗಿಲ್ಲ. ಈಗ ಇಂತಹ ಪ್ರಭಾವವನ್ನು ನೋಡುವೆವು. ಬಾಣದ ಜೊತೆಗೆ ಪಕ್ಷಿಯೂ ಬರುವ ಹಾಗೆ ಬಾಣವನ್ನು ಹಾಕಬೇಕು ಎಂದು ಸಾಕಾರದಲ್ಲಿ ಹೇಗೆ ಹೇಳುತ್ತಿದ್ದರೋ ಅಂತಹ ಬಾಣ ಹೊಡೆಯಿರಿ. ಈಗ ತಮ್ಮ ಆತ್ಮಿಕಶಕ್ತಿಯಿಂದ ಇದು ಸಾಧ್ಯವಾಗುವುದು.

ಎಲ್ಲಕ್ಕಿಂತ ಹೆಚ್ಚು ದೂರ ಯಾವ ಬೆಳಕು ಹೋಗುವುದು? ಲೈಟ್ ಹೌಸ್ ನ ಬೆಳಕು ಹಾಗಾದರೆ ಈಗ ಲೈಟ್ ಹೌಸ್ & ಸರ್ಚ್ ಲೈಟ್ ಆಗಬೇಕು. ಸಾಮಾನ್ಯ ಬಲ್ಬ್ ಅಲ್ಲ, ಯಾರು ಸರ್ಚ್ ಮಾಡುತ್ತಾರೋ ಅವರು ಸರ್ಚ್ ಲೈಟ್ ಆಗಲು ಸಾಧ್ಯ ಯಾರು ಎಷ್ಟು ಸ್ವಯಂನ್ನು ಶೋಧಿಸಿಕೊಳ್ಳುತ್ತಾರೋ ಅಷ್ಟು ಸರ್ಚ್‌ಲೈಟ್ ಆಗುವರು. ಸ್ವಯಂನ್ನು ಹುಡುಕಲಾರದವರು ಸರ್ಚ್ ಲೈಟ್ ಆಗಲಾರರು. ಈಗ ಆ ಸಮಯ ಬಂದಿದೆ. ಈಗ ಶಕ್ತಿಶಾಲಿಯೂ ಅಲ್ಲ ಆದರೆ ಆತ್ಮಿಕಶಕ್ತಿಯುಳ್ಳವರು ಆಗಬೇಕು, ಆತ್ಮಿಕಶಕ್ತಿ ಮತ್ತು ವಿಶಾಲಬುದ್ಧಿ ಎಂದರೆ ಬೇಹದ್ದಿನ ಕಡೆಗೆ ದೃಷ್ಟಿ, ವೃತ್ತಿ, ಹಾಗಾದರೆ ಈಗ ಏನನ್ನು ಕೂಡಿಸಿಕೊಳ್ಳುವಿರಿ? ಶಕ್ತಿಯಿದೆ ಆದರೆ ಈಗ ಆತ್ಮಿಕಶಕ್ತಿ ಮತ್ತು ವಿಶಾಲತೆಯ ಶಕ್ತಿಬೇಕು. ಇಂದು ಬಾಪ್ ದಾದಾ ಯಾವ ರೂಪದಿಂದ ನೋಡುತ್ತಿದ್ದಾರೆ? (ಭರವಸೆಯ ನಕ್ಷತ್ರ). ಭರವಸೆಯ ನಕ್ಷತ್ರಗಳಾಗಿರುವಿರಿ ನಂತರ ಸಫಲತೆಯ ನಕ್ಷತ್ರಗಳಾಗುವಿರಿ, ವರ್ತಮಾನವನ್ನೂ ನೋಡುತ್ತಾರೆ ಮತ್ತು ಭವಿಷ್ಯವನ್ನೂ ನೋಡುತ್ತಿದ್ದಾರೆ. ಸಫಲತೆ ತಮ್ಮ ಕೊರಳಹಾರವಾಗಿದೆ. ತಮ್ಮ ಕೊರಳಲ್ಲಿ ಸಫಲತೆಯ ಮಾಲೆ' ಕಂಡುಬರುತ್ತದೆಯೇ? ಸಂಗಮದಲ್ಲಿ ಯಾವ ಶೃಂಗಾರವಿದೆ? ಸಫಲತೆಯ ಮಾಲೆ ಯಥಾಯೋಗ್ಯ, ಯಥಾಶಕ್ತಿ ಪ್ರತಿಯೊಬ್ಬರ ಕೊರಳಲ್ಲಿದೆ. ಆದ್ದರಿಂದ ಬಾಪ್ ದಾದಾ ಮಕ್ಕಳ ಶೃಂಗಾರವನ್ನು ನೋಡುತ್ತಾರೆ. ಶೃಂಗರಿತ ಮಕ್ಕಳು ಪ್ರಿಯ, ಈಗ ಬಾಪ್ ದಾದಾ ಯಾವ ಸಂಕಲ್ಪವನ್ನು ಮಾಡುತ್ತಿದ್ದಾರೆ? ಬಾಪ್ ದಾದಾ ತಮಗೆ ಏನನ್ನು ಹೇಳಬಯಸುತ್ತಾರೆ ಎಂಬುದನ್ನು ಗ್ರಹಿಸಬಲ್ಲಿರಾ? ಇತ್ತೀಚೆಗೆ ಬಾಪ್ ದಾದಾ ಬುದ್ಧಿಯ ಡ್ರಿಲ್ ಮಾಡಿಸಲು ಬರುತ್ತಾರೆ. ಈಗ ಮೈದಾನದಲ್ಲಿ ಪ್ರತ್ಯಕ್ಷರಾಗಬೇಕು, ಈಗ ಗುಪ್ತರಾಗಿರುವ ಸಮಯವಲ್ಲ. ಎಷ್ಟು ಪ್ರತ್ಯಕ್ಷರಾಗುವಿರೋ ಅಷ್ಟು ಬಾಪ್ ದಾದಾರನ್ನು ಪ್ರಖ್ಯಾತ ಮಾಡುವಿರಿ. ಬೇಹದ್ದಿನಲ್ಲಿ ಸುತ್ತಾಡಿ ಚಕ್ರವರ್ತಿ ಆಗುತ್ತಿರುವಿರಿ? ಒಂದು ಸ್ಥಾನದಲ್ಲಿ ಕುಳಿತು ಚಕ್ರ ಸುತ್ತದೇ ಇರುವವರಿಗೆ ಏನೆಂದು ಹೇಳಲಾಗುತ್ತದೆ? ಯಾರು ಒಂದೇ ಸ್ಥಾನದಲ್ಲಿ ಸ್ಥಿತರಾಗಿ ಸೇವೆಯನ್ನು ಮಾಡುತ್ತಿದ್ದರೂ ಬೇಹದ್ದಿನಲ್ಲಿ ಸುತ್ತಾಡದಿದ್ದರೆ ಭವಿಷ್ಯದಲ್ಲಿಯೂ ಅವರಿಗೆ ಒಂದು ಸ್ವತಂತ್ರ ರಾಜ್ಯ ಸಿಗುವುದು. **ತಂದೆಯೂ ಎಲ್ಲರ ಸಹಯೋಗಿ ಆದರಲ್ಲವೇ? ಹಾಗೆಯೇ ವಿಶ್ವದ ಪ್ರತಿಯೊಂದು ಆತ್ಮನ ಜೊತೆಗೆ ಸಂಬಂಧ ಜೋಡಿಸುವವರು ಮತ್ತು ಸಹಯೋಗಿಯಾಗುವವರೇ ವಿಶ್ವದ ಮಹಾರಾಜರಾಗುವರು. ಬಾಪ್ ದಾದಾ ಹೇಗೆ ವಿಶ್ವದ ಸ್ನೇಹಿ ಸಹಯೋಗಿಯಾದರೋ ಹಾಗೆಯೇ ಮಕ್ಕಳೂ ತಂದೆಯನ್ನು ಅನುಸರಿಸಬೇಕು. ಆಗ ವಿಶ್ವಮಹಾರಾಜನ ಪದವಿಗೆ ಅಧಿಕಾರಿಗಳಾಗುವರು. ಲೆಕ್ಕವಿದೆಯಲ್ಲವೇ? ಹೇಗೆ ಮತ್ತು ಎಷ್ಟು, ಹಾಗೆಯೇ ಮತ್ತು ಅಷ್ಟೇ ಸಿಗುವುದು.** ಈಗ ಪ್ರತಿಜ್ಞೆ ಮಾಡಿ ವಿಶೇಷ ಪ್ರತ್ಯಕ್ಷವಾಗಬೇಕು. ಬೇರೆಯವರನ್ನು ಪ್ರಖ್ಯಾತ ಮಾಡುವುದಲ್ಲ, ತಂದೆಯನ್ನು ಪ್ರತ್ಯಕ್ಷ ಮಾಡುವುದು. ಪ್ರತ್ಯಕ್ಷರಾದಾಗ ಪ್ರಖ್ಯಾತರಾಗುವಿರಿ, ವಿಶ್ವಾಧಿಕಾರಿಯಾಗುವ ಗುರಿಯಿಟ್ಟುಕೊಂಡಿರುವಿರಲ್ಲವೇ? ಈಗ ಇದೇ ತೀವ್ರ ಪುರುಷಾರ್ಥವನ್ನು ಮಾಡಬೇಕು. ಈ ಹಳೆಯ ಜಗತ್ತಿನಿಂದ ಬಹಳ ಸಹಜ ಬೇಹದ್ದಿನ ವೈರಾಗ್ಯ ತರುವ ಸಾಧನವೇನಾಗಿದೆ? (ಕೆಲವರು ಹೇಳಿದರು), ಯಾರೆಲ್ಲ ಏನೆಲ್ಲಾ ಮಾತುಗಳನ್ನು ಹೇಳಿದಿರೋ ಅದು ಸಹಜವೆಂದು ತಿಳಿದು ಹೇಳಿದಿರಲ್ಲವೇ? ಸಹಜವಾಗಿದ್ದರೆ ಸಹಜವಾಗಿ ಬೇಹದ್ದಿನ ವೈರಾಗಿಯಾದಿರಿ, ತಮಗೆ ಇದನ್ನು ಅನ್ವಯಿಸಿಕೊಳ್ಳದಿದ್ದರೆ ಬೇರೆಯವರಿಗೆ ಹೇಗೆ ಅನ್ವಯಿಸುವಿರಿ? ಬೇಹದ್ದಿನ ವೈರಾಗ್ಯವೆಂದು ಹೇಳುವಿರಲ್ಲವೇ? ವೈರಾಗಿಗಳು ಎಲ್ಲಿ ವಾಸ ಮಾಡುತ್ತಾರೆ? ಸದಾ ತಮ್ಮನ್ನು ಮಧುಬನ ನಿವಾಸಿಯೆಂದು ತಿಳಿಯುವುದು ಬಹಳ ಸರಳ ಯುಕ್ತಿಯಾಗಿದೆ. ಆದರೆ ಮಧುಬನವನ್ನು ಖಾಲಿಯಾಗಿ ನೋಡಬೇಡಿ, ಮಧುಬನ ಮಧುಸೂದನನ ಜೊತೆಗೆ ಇದೆ. ಮಧುಬನ ಒಂದು ಕ್ಷಣದಲ್ಲಿ ಎಲ್ಲವನ್ನು ತ್ಯಾಗ ಮಾಡಿಸುತ್ತದೆ. ಇಲ್ಲಿ ಬೇಹದ್ದಿನ ವೈರಾಗಿಗಳಾಗಿದ್ದೀರಲ್ಲವೇ? ಆದ್ದರಿಂದ ಮಧುಬನವಾಗಿದೆ ತ್ಯಾಗಿ, ವೈರಾಗಿ ಮಾಡುವಂತಹುದು. ಬೇಹದ್ದಿನ ವೈರಾಗಿಗಳಾದಾಗ ಬೇಹದ್ದಿನ ಸೇವೆಯನ್ನು ಮಾಡಬಹುದು. ಎಲ್ಲಿಯೂ ಎಳೆತ ಬೇಡ. ಬೇರೆಯವರ ಮಾತನ್ನು ಬಿಡಿ ತಮ್ಮೊಂದಿಗೂ ಎಳೆತ ಬೇಡ.

ಇಂದು ಬಾಪ್ ದಾದಾರವರ ಪರಸ್ಪರ ಆತ್ಮಿಕ ಸಂಭಾಷಣೆ ನಡೆದಿತ್ತು. ಇಂದು ಬೆಳಿಗ್ಗೆ ಪ್ರತಿಯೊಂದು ಮಗುವು ಎಷ್ಟು ಬಂಧಿಸಲ್ಪಟ್ಟಿದೆ ಮತ್ತು ಎಷ್ಟು ಬಂಧನದಿಂದ ಬಿಡುಗಡೆಯಾಗಿದೆ ಎಂಬ ದೃಶ್ಯವನ್ನು ವತನದಿಂದ ನೋಡುತ್ತಿದ್ದರು, ಎಲ್ಲಿಯವರೆಗೆ ಬಂಧನ ಕತ್ತರಿಸಿಲ್ಲ? ಕೆಲವರದು ದಪ್ಪ ಹಗ್ಗಗಳಿವೆ, ಕೆಲವರದು ಕಡಿಮೆ, ಕೆಲವರದು ತಳುವಾದ ದಾರಗಳಿವೆ. ಯಾರವು ತೆಳು ದಾರಗಳು ಉಳಿದಿವೆಯೋ, ಯಾರ ಹಗ್ಗಗಳು ಉಳಿದಿವೆಯೋ ಎಂಬುದನ್ನು ನೋಡುತ್ತಿದ್ದೆವು. ತೆಳುವಾದ ಹಗ್ಗಗಳಿದ್ದರೂ, ದಪ್ಪ

ಹಗ್ಗಗಳಿದ್ದರೂ ಅವುಗಳನ್ನು ಬಂಧನ ಎಂದೇ ಕರೆಯಲಾಗುತ್ತದೆಯಲ್ಲವೇ? ಒಂದಿಲ್ಲೊಂದು ಗಟ್ಟಿಯಾದ ಅಥವಾ ತೆಳುವಾದ ದಾರವಿದೆ. ಗಟ್ಟಿಯಾಗಿರದ ದಾರವನ್ನೂ ಬಂಧನವೆಂದೇ ಹೇಳುವರಲ್ಲವೇ? ಆದರೆ ಅವುಗಳನ್ನು ಕತ್ತರಿಸಲು ಸಮಯ ಬೇಕಾಗಿಲ್ಲ ಅಷ್ಟೇ. ದೊಡ್ಡ ಹಗ್ಗದವರಿಗೆ ಸಮಯ ಮತ್ತು ಪರಿಶ್ರಮ ಬೇಕಾಗುವುದು. ಆದ್ದರಿಂದ ವತನದಿಂದ ಈ ದೃಶ್ಯವನ್ನು ನೋಡುತ್ತಿದ್ದರು. ಪ್ರತಿಯೊಬ್ಬರೂ ತಮ್ಮನ್ನು ತಾವು ತಿಳಿದುಕೊಂಡಿರುವಿರಲ್ಲವೇ? ದಪ್ಪ ಹಗ್ಗವಿದೆಯೋ ಅಥವಾ ತೆಳುವಾದದ್ದಿದೆಯೋ? ಗಟ್ಟಿಯಾಗಿದೆಯೋ ಅಥವಾ ಇಲ್ಲವೋ? ಬಂಧಿತರೋ ಅಥವಾ ಸ್ವತಂತ್ರರೋ ? ಸ್ವತಂತ್ರದ ಅರ್ಥವಾಗಿದೆ ಸ್ಪಷ್ಟ. ಆದರೂ ಸಹ ಬಾಪ್ ದಾದಾ ಖುಷಿಪಡುತ್ತಾರೆ. ಅದ್ಭುತವನ್ನು ಮಾಡುತ್ತೀರಿ, ಆದರೆ ಬಾಪ್ ದಾದಾ ಅದಕ್ಕಿಂತಲೂ ಹೆಚ್ಚು ನೋಡ ಬಯಸುತ್ತಾರೆ. ಎಷ್ಟು ತಮ್ಮ ಬಾಯಲ್ಲಿ ಬಾಪ್ ದಾದಾರ ಹೆಸರಿರುವುದೋ ಅಷ್ಟು ಎಲ್ಲರ ಬಾಯಲ್ಲಿ ತಮ್ಮ ಹೆಸರಿರುವುದು. ಮಧುಬನವಾಗಿದೆ ಪರಿವರ್ತನಾ ಭೂಮಿ ಯಾವ ಪರಿವರ್ತನೆ ಮಾಡಿಕೊಂಡು ಹೋಗಬೇಕು ಎಂಬುದು ತಿಳಿಯಿತಲ್ಲವೇ?

ಅವ್ಯಕ್ತ ಮುರಳಿ 02-07-1970.

***ಶಾಂತಿಯ ಶಕ್ತಿಯ ಪ್ರಯೋಗ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪ್ರೇಮ ಮತ್ತು ಸಂಹಾರ ಎರಡೂ ರೂಪಗಳನ್ನು ಪ್ರತ್ಯಕ್ಷ ಮಾಡಿದ್ದೇನೆ.

2. ನಾನು ಸದಾಕಾಲಕ್ಕೂ ಮಾಯೆಯನ್ನು ಜಯಿಸಿ, ಸಂಕಲ್ಪ ಮತ್ತು ಕರ್ಮವನ್ನು ಸಮಾನವಾಗಿಟ್ಟು ಸಂಕಲ್ಪದ ಖಜಾನೆಯನ್ನು ಸಮರ್ಥವಾಗಿ ಉಪಯೋಗಿಸಿರುವ ಶಿವಶಕ್ತಿ ಮೂರ್ತಿ.

3. ನಾನು ತಂದೆಯ ಸಮಾನ.. ಒಂದೊಂದು ಸಂಕಲ್ಪದಿಂದ ಕಲ್ಯಾಣ ಮಾಡಬಲ್ಲ ಕಲ್ಯಾಣಕಾರಿ.

4. ನಾನು ಶುದ್ಧ ಸಂಕಲ್ಪಗಳ ಆತ್ಮಿಕ ಶಕ್ತಿಯಿಂದ ಶ್ರಮವಿಲ್ಲದೆ ಆತ್ಮರನ್ನು ಆಕರ್ಷಿಸಿದ್ದೇನೆ.

5. ನಾನು ಲೈಟ್ ಹೌಸ್ ನ ಪ್ರಕಾಶದಿಂದ ಸರ್ಚ್ ಲೈಟ್ ಆಗಿ ಆತ್ಮಿಕ ಶಕ್ತಿ, ವಿಶಾಲ ಬುದ್ಧಿ (ಬೇಹದ್ದಿನ ಕಡೆ ದೃಷ್ಟಿ) ಯನ್ನು ಧಾರಣೆ ಮಾಡಿದ್ದೇನೆ.

6. ನಾನು ಈಗ ತಂದೆಯ ಭರವಸೆಯ ನಕ್ಷತ್ರ ಮತ್ತು ಭವಿಷ್ಯದ ಆಶಾ ನಕ್ಷತ್ರ.

7. ನಾನು ಬಾಪ್ ದಾದಾರ ಸಮಾನವಾದ ವಿಶ್ವಸ್ನೇಹಿ ಮತ್ತು ಸಹಯೋಗಿಯಾಗಿ ವಿಶ್ವದಲ್ಲಿ ಪ್ರತಿ ಆತ್ಮನೊಂದಿಗೆ ಸಂಬಂಧವನ್ನು ಜೋಡಿಸುವ ವಿಶ್ವ ಮಹಾರಾಜನು.

8. ನಾನು ಸದಾ ಮಧುಬನ ನಿವಾಸಿ ಎಂದು ಭಾವಿಸಿ, ದೈವೀ ಪರಿವಾರ, ತ್ಯಾಗ, ತಪಸ್ಸು ಮತ್ತು ಸೇವೆಯನ್ನು ಸದಾ ಸ್ಮೃತಿಯಲ್ಲಿಟ್ಟಿರುವ ಬೇಹದ್ ವೈರಾಗಿ.

9. ನಾನು ಅನಂತ ಸೇವೆಯನ್ನು ಮಾಡಿರುವ ಬೇಹದ್ ವೈರಾಗಿ.

10. ನಾನು ಎಲ್ಲಾ ವಿಧವಾದ ಬಂಧನಗಳನ್ನು ಸಮಾಪ್ತಿ ಮಾಡಿಕೊಂಡು ಸ್ವತಂತ್ರವಾಗಿ ಸ್ಪಷ್ಟವಾಗಿರುವ ಪರಿವರ್ತನಾ ಸ್ವರೂಪ.